ಕವಿತೆ

# ಕಾವಲುಗಾರರು




## ನಾ. ದಾಮೋದರ ಶೆಟ್ಟಿ

ಕಲೆ: ಮುರಳೀಧರ್ ರಾಥೋಡ್


ನಮಗಂದು ಮೊದಲ ರಾತ್ರಿ
ಚಂದಿರ ಹಾಲು ಚೆಲ್ಲಿದ್ದ. ಹಾಗೆ ಹಾಯಾಗಿ
ಕೈಕೈ ಹಿಡಿದು ನಾಲ್ಕು ಹೆಜ್ಜೆ ನಡೆಯೋಣವೆಂದು
ಹೊರಗಡಿಯಿಟ್ಟಾಗ ಉದ್ದದ ಒಬ್ಬಾತ ಪಕ್ಕದಲ್ಲೆ!
ಥಟ್ಟನೆ ನಿಂತು ಅವನನ್ನೇ ದಿಟ್ಟಿಸುತ್ತಿದ್ದಾಗ
ತುಸು ಗಿಡ್ಡದ ಇನ್ನಿಬ್ಬರು ನಮ್ಮ ಎದುರಲ್ಲೆ!
ನಮ್ಮ ಏಕಾಂತವ ತಡೆಯ ಬಂದವನೆ ಆ ಒಬ್ಬ?
ತಡೆಯ ಬಂದವನ ತಡೆಯ ಬಂದವರೆ ಈ ಇಬ್ಬರು?

ನನ್ನಾಕೆಗಿಂತ ನಾನು ಮುಂದೆ
ನನಗಿಂತ ನನ್ನಾಕೆ ಮುಂದೆ ಎಂದೇನೂ
ಹೇಳುವಂತಿಲ್ಲ! ಇಬ್ಬರ ನಡಿಗೆಯೂ
ಸಮಸಮ ಎಂಬುದಕ್ಕೆ
ನಮ್ಮ ಎದುರಿನ ಆ ಮೂವರು ಸಾಕ್ಷಿ!
ಅವಳ ಕೈ ನಾ ಹಿಡಿದೆನೋ ನನ್ನದ ಅವಳೊ?
ನೆರಳು ಬೆಳಕಿನಾಟದಲ್ಲಿ ಅರಿವಾಗಲಿಲ್ಲ. ಕೊನೆಗೂ
ಆ ಉದ್ದದ ಒಬ್ಬಾತ ಈ ಇಬ್ಬರು ಜಂಗಮರ ಮುಂದೆ
ಏಗಲಾಗದೆ ಹಿಂದೆ ಬಿದ್ದ.

ತಿರುವಿನಲ್ಲಿ ತಿರುಗಿದ ನಾವು 'ಮುಂದೆ ಯಾರೂ ಇಲ್ಲ'
ಎಂದುಕೊಂಡರೆ ಈ ಇಬ್ಬರು ನಮ್ಮೊಂದಿಗೇ
ಪಥ ಬದಲಿಸಿದ್ದಾರೆ, ಕೈ ಕೈ ಹಿಡಿದು, ಹಿಂದಿನಿಂದ!

ಒಮ್ಮೆ ಮುಂದೆ, ಮತ್ತೊಮ್ಮೆ ಹಿಂದೆ, ಒಮ್ಮೆ ಉದ್ದ
ಮತ್ತೊಮ್ಮೆ ಗಿಡ್ಡ
ನಮ್ಮಂತೆಯೆ.

ಮದುವೆಯ ಮೊದಲ ರಾತ್ರಿಯಲ್ಲಿ
ನಾವಿಬ್ಬರೆ ಹೊರ ಹೊರಟದ್ದೆಷ್ಟು ಅಪಾಯಕಾರಿ
ಎಂಬುದು ಆ ಇಬ್ಬರಿಗೆ ಗೊತ್ತಿರಬೇಕು, ಅದಕ್ಕೇ ಅನ್ನುವರು
ದೇಹ ಬೇರೆಯಲ್ಲ; ಆತ್ಮಬೇರೆಯಲ್ಲ
ನೆಳಲು ಬೆಳಕಿನಂತೆ ಎಂದು.

